## ಪಂಚಾಯ್ತಿಗೆ ಪ್ರತಿರೋಧ



ನಮ್ಮ ಊರಿನಲ್ಲಿ ಹಳ್ಳಿಕಟ್ಟೆ ಪಂಚಾಯ್ತಿಗಳು ನಡೆಯುತ್ತಿದ್ದವು. ಆ ಪಂಚಾಯ್ತಿಗೆ ತಪ್ಪಿಸಿಕೊಂಡರೆ ₹ 5 ದಂಡ ವಿಧಿಸುತ್ತಿದ್ದರು. ಇದು 20–25 ವರ್ಷಗಳ ಹಿಂದಿನ ಮಾತು. ಕೂಲಿಯ ರೂಪದಲ್ಲಿ ದೊರೆಯುತ್ತಿದ್ದ 5 ರೂಪಾಯಿ ಆಗ ಬಹುಪಾಲು ಮೊತ್ತ. ಈ ಪಂಚಾಯ್ತಿಗಳು ನನಗೆ ನಮ್ಮ ಸಮುದಾಯದ ವಿರುದ್ಧವಾಗಿ ಕಾಣುತ್ತಿದ್ದವು. ಬಡತನದಲ್ಲಿ ನಮ್ಮಂತಹವರು ಬೆಳಿಗ್ಗೆ ಎದ್ದು ಬೇರೆ ಊರಿಗೆ ಅನ್ನ ಅರಸಿ ಹೋಗಬೇಕಿತ್ತು. ಆದರೆ ಪಂಚಾಯ್ತಿಗಳನ್ನು ಅವರು ತಮಗೆ ಬೇಕಾದ ಸಮಯಕ್ಕೆ ಮಾಡುತ್ತಿದ್ದರು. ಇದರಿಂದ ನಮ್ಮ ದುಡಿಮೆಗೆ ಪೆಟ್ಟು ಬೀಳುತ್ತಿತ್ತು. ಇದು ತಪ್ಪು ಅನ್ನಿಸಿತು. ಆಗ ಪೊಲೀಸ್ ಠಾಣೆಗೆ, ಆಕಾಶವಾಣಿಗೆ ಇದರ ವಿರುದ್ಧ ಅರ್ಜಿ ಬರೆದೆ.

ನನ್ನಲ್ಲಿ ಆಗ ಹಳೇ ಲೂನಾ ಇತ್ತು. ಆ ಪಂಚಾಯ್ತಿ ವ್ಯವಸ್ಥೆಯನ್ನು ವಿರೋಧಿಸಲು ಲೂನಾ ಚಲಾಯಿಸಿಕೊಂಡು ಬಂದು, ಗಾಡಿಯ ಬೆಳಕನ್ನು ಪಂಚಾಯ್ತಿ ನಡೆಸುತ್ತಿದ್ದ ಪಂಚರ ಮೇಲೆ ಬಿಡುತ್ತಿದ್ದೆ. ಪ್ರತಿರೋಧದ ಆ ಶಕ್ತಿ ಮತ್ತು ಕೆಚ್ಚು ನೀಡಿದ್ದು ಅಂಬೇಡ್ಕರ್. ಪಂಚಾಯ್ತಿ ವ್ಯವಸ್ಥೆಯನ್ನು ವಿರೋಧಿಸುವ ಮೂಲಕ ನನ್ನೊಳಗೆ ಅಂಬೇಡ್ಕರ್ ಪ್ರವಹಿಸಿದರು. ನಮಗೆ ಒಂದು ಸಂವಿಧಾನ ಇದೆ. ಅದರಲ್ಲಿ ಇಂತಹ ಫ್ಯೂಡಲ್ ಪಂಚಾಯ್ತಿಗಳಿಗೆ ಅವಕಾಶ ಇಲ್ಲ ಎನ್ನುವುದರ ಅರಿವು ಉಂಟಾಯಿತು. ಈ ರೀತಿಯಲ್ಲಿ ನಾನು ಅಂಬೇಡ್ಕರ್ ಅವರನ್ನು ಕಂಡುಕೊಂಡೆ.

ಪ್ರಭಾವಿ ವ್ಯಕ್ತಿಗಳು ಮಾಡಿದ ಕೆಲಸಗಳು ದೀರ್ಘಕಾಲ ಜೀವಂತಿಕೆಯಿಂದ ಬಾಳುತ್ತವೆ. ಅಂಬೇಡ್ಕರ್ ಅವರು ಇಲ್ಲದಿದ್ದರೆ ನಮ್ಮಂತಹ ಸಮುದಾಯಗಳ ಬದುಕೇ ದುರ್ಭರ ಆಗುತ್ತಿತ್ತು.

—ಆಲೂರು ದೊಡ್ಡನಿಂಗಪ್ಪ,
ರಂಗಾಯಣ, ಮೈಸೂರು

## ಚಟ್ನಿಯಿಂದ ಚಿಂತನೆಯವರೆಗೆ...



ಅದು 2001ನೇ ಇಸವಿ. ನಾನು ದ್ವಿತೀಯ ಪಿಯುಸಿ ಓದುತ್ತಿದ್ದೆ. ನಮಗೆ ಸರ್ಕಾರಿ ಹಾಸ್ಟೆಲ್ ಸೌಲಭ್ಯ ಇತ್ತು. ಅದರ ಹೆಸರು ಬಾಪೂಜಿ ಹಾಸ್ಟೆಲ್. ಆ ವರ್ಷದ ಅಂಬೇಡ್ಕರ್ ಜಯಂತಿಗೆ ಕೆಲವೇ ದಿನಗಳು ಉಳಿದಿದ್ದವು. ಆ ಸಮಯದಲ್ಲಿ ವಾರ್ಡನ್ ಹಾಗೂ ವಿದ್ಯಾರ್ಥಿಗಳಿಗೆ ಒಂದು ಸಣ್ಣ ಜಗಳ ಆಯಿತು. ನಾವು ಅದನ್ನು ಪ್ರತಿಭಟನೆ ಎಂದು ಸಂಭ್ರಮಿಸಿಕೊಂಡೆವು. ಜಗಳಕ್ಕೆ ಕಾರಣ ದೋಸೆಗೆ ಕೊಡಬೇಕಿದ್ದ ಚಟ್ನಿ ನೀರಾಗಿತ್ತು.

ನೀರು ನೀರಾಗಿದ್ದ ಚಟ್ನಿ ತುಂಬಿದ್ದ ಬಕೆಟ್ ಅನ್ನು ಭಟ್ಟರ ಮೇಲೆ ಹೊರಿಸಿಕೊಂಡು ಸಮಾಜ ಕಲ್ಯಾಣ ಇಲಾಖೆ ಕಚೇರಿವರೆಗೆ ನಡೆದುಕೊಂಡು ಬಂದಿದ್ದೆವು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ವಾರ್ಡನ್‌ನನ್ನು ಬೈದ ಪರಿಣಾಮ, ವಾರ್ಡನ್ ಎಲ್ಲ ವಿದ್ಯಾರ್ಥಿಗಳಿಗೂ ಚಿಕನ್ ಊಟ ಕೊಡಿಸಿದ್ದರು. ನಂತರದ್ದು ಏಪ್ರಿಲ್ 14ರ ‘ಅಂಬೇಡ್ಕರ್ ಜಯಂತಿ’ ಕಾರ್ಯಕ್ರಮ. ಸಮಾಜ ಕಲ್ಯಾಣ ಅಧಿಕಾರಿ ಮುಖ್ಯ ಅತಿಥಿಯಾಗಿದ್ದರು. ಅಂದಿನ ಭಾಷಣದಲ್ಲಿ ಅಂಬೇಡ್ಕರ್ ವಿಚಾರಗಳನ್ನು ಹೇಳುತ್ತ, ‘ಬರಿ ಊಟದ ಕಾರಣಕ್ಕೆ ಪ್ರತಿಭಟನೆ ಮಾಡಬಾರದು. ಅಕ್ಷರ ಕಲಿತು ವಿದ್ಯಾವಂತರಾಗಿ. ನೀವು ಕಲಿತ ಶಿಕ್ಷಣ ನಿಮ್ಮನ್ನು ಸಮುದಾಯದಿಂದ ದೂರ ಮಾಡಬಾರದು’ ಎನ್ನುವ ಬಾಬಾ ಸಾಹೇಬರ ಮಾತುಗಳನ್ನು ಉಲ್ಲೇಖಿಸಿದರು. ಆ ಮಾತುಗಳು ನನ್ನ ಮೇಲೆ ಪರಿಣಾಮ ಬೀರಿ ಅಂಬೇಡ್ಕರ್ ಅವರನ್ನು ಓದುವಂತೆ ಮಾಡಿತು.

ಪದವಿ ಮುಗಿಸಿದ ನಂತರ ಅದೇ ಹಾಸ್ಟೆಲ್‌ನವರು ಅಂಬೇಡ್ಕರ್ ಜಯಂತಿಗೆ ನನ್ನ ಆಹ್ವಾನಿಸಿದರು. ಅದೇ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅತಿಥಿ ಆಗಿದ್ದರು. ನಾನು ಮುಖ್ಯ ಭಾಷಣಕಾರ.

ಅಂಬೇಡ್ಕರ್ ವಿಚಾರಗಳು ಮನುಷ್ಯ ಸಂಬಂಧವನ್ನು, ಪ್ರೀತಿಸುವುದನ್ನು ಹೇಳಿಕೊಟ್ಟಿವೆ. ಅಂಬೇಡ್ಕರ್ ವಿಚಾರಗಳ ಸ್ಫೂರ್ತಿಯಿಂದಲೇ ಪಿಯುಸಿಯಲ್ಲಿ ಅನುತ್ತೀರ್ಣನಾಗಬೇಕಾದ ನಾನು ಮತ್ತು ನನ್ನಂತಹವರು ಪದವಿ ಪಡೆದು ಸಮುದಾಯಗಳ ಜೊತೆ ಇರಲು ಸಾಧ್ಯವಾಯಿತು.

—ಕೊಟ್ಟ ಶಂಕರ್,
ಉಪನ್ಯಾಸಕ, ತುಮಕೂರು

## ಮಹಾಬೋಧಿ ವೃಕ್ಷದ ನೆರಳಲ್ಲಿ...



ಅಂಬೇಡ್ಕರ್ ಹೇಗೆ ಪರಿಣಾಮ ಬೀರಿದ್ದಾರೆ ಎನ್ನುವ ಪ್ರಶ್ನೆ ಎದುರಾದಾಗ ನಾನು ನನ್ನ ಬದುಕಿನ 20 ವರ್ಷಗಳ ಹಿಂದಕ್ಕೆ ಹೋಗ್ತೀನಿ. ಮತ್ತದೇ ಬದುಕಿನ ದಾರಿಯನ್ನು ನೆನಪು ಮಾಡ್ಕೊಂತೀನಿ.

ಹುಟ್ಟಿಗಂಟಿದ್ದ ಜಾತಿ, ಬಡತನ, ಅದೇ ಅವಮಾನ, ಅಪಮಾನಗಳ ಬದುಕು. ಈ ಬದುಕು ಒಂದು ನೆಲೆಕಂಡಿದ್ದು, ನಾವು ನೋವು ತಿಂದೋರು ನಮ್ಮ ದನಿ ನಿಮಗಿಂತ ಗಟ್ಟಿಯಾಗಿ ಇರುತ್ತದೆ ಅಂತ ಸಿಡಿದು ನಿಲ್ಲೋಕೆ ಸಾಧ್ಯ ಆಗಿದ್ದು, ಅಂಬೇಡ್ಕರ್ ಎನ್ನುವ ಮಹಾವೃಕ್ಷದ ನೆರಳಿನಿಂದ.

ಜಾತಿ, ಬಡತನದ ಕಾರಣಕ್ಕೆ ನನ್ನ ಪ್ರಾಥಮಿಕ ಶಿಕ್ಷಣ ಅವಮಾನಗಳಿಂದ ಮೊದಲಾಯ್ತು. ಆರು, ಏಳನೇ ತರಗತಿಯ ಹೊತ್ತಿಗೆ ನನ್ನೂರಿನ ದಲಿತ ಯುವಕರು, ಜೊತೆಗೆ ನನ್ನಣ್ಣ ಅಂಬೇಡ್ಕರ್ ಸಂಘಟನೆಯನ್ನು ಕಟ್ಟಿ, ಅರಿವನ್ನು ಬಿತ್ತೋಕೆ ಶುರುಮಾಡಿದ್ರು. ಜಾತಿಯಿಂದ ಬೆದರಿ ಶಾಲೆ ಬಿಡ್ಬೇಕು ಅಂದ್ಕೊಳ್ತಾಗ್ಲೆ ನನಗೆ ಅಂಬೇಡ್ಕರ್ ಅನ್ನೋ ಆಲದ ಮರದ ಆಶ್ರಯ ಸಿಕ್ಕಿತ್ತು. ಜಾತಿ ಹೆಸರು ಹೇಳೋಕಾಗ್ದೆ ನರಳ್ತಿದ್ದೋಳು ನನ್ನ ಜಾತಿಯನ್ನ ಗಟ್ಟಿಯಾಗಿ ಹೇಳೋದನ್ನ ಕಲಿತೆ. ಅಸಹಾಯಕತೆಯಿಂದ ಅಪರಿಚಿತ ಅನ್ನಿಸ್ತಿದ್ದ ನೆಲ ನಮ್ಮದೇ ಅನ್ನೋ ಆಪ್ತತೆ ಹುಟ್ಟಿದ್ದೇ ಅಲ್ಲಿಂದ. ಯಾವುದರಿಂದ ಅವಮಾನ ಎದುರಿಸ್ತಿದ್ನೋ ಅದರಿಂದ್ಲೇ ಗೌರವದ ಬದುಕು ಸಿಗೋತರ ಬೆಳೆದೆ. ನಮ್ಮನ್ನ ಮುಟ್ಟಿಸಿಕೊಳ್ಳೋಕೆ ಅಸಹ್ಯ ಪಡೋ ಈ ಜನ ಸಂವಿಧಾನದ ಅಡಿಯಲ್ಲೆ ಬದುಕಬೇಕು. ಅದನ್ನು ಬರೆದವರು ನಮ್ಮ ಅಂಬೇಡ್ಕರ್. ನಾವು ಯಾರ ಆಳ್ವಿಕೆಯಲ್ಲೂ ಬದುಕಬೇಕಿಲ್ಲ. ಈ ನೆಲ ನಮ್ಮದು ಅನ್ನೋ ಅರಿವು ಅಂಬೇಡ್ಕರ್ ಅವ್ರನ್ನ ಓದೋ ಹಾಗೆ ಮಾಡ್ತು.

ಪ್ರತಿಯೊಬ್ಬರಿಗೂ ಗೌರವಯುತ ಬದುಕು ಸಿಗಬೇಕು. ನಿನಗೆ ಗೌರವ ಇಲ್ಲದ ಜಾಗದಲ್ಲಿ ನಿನ್ನ ಚಪ್ಪಲಿಯನ್ನೂ ಬಿಡಬೇಡ ಎನ್ನುವ ಅಂಬೇಡ್ಕರ್ ಮಾತುಗಳೇ ನನ್ನ ಬದುಕಿನ ಸಿದ್ಧಾಂತವಾಗಿ, ಯಾರ ಎದುರೂ ತಲೆತಗ್ಗಿಸದ ರೀತಿ ಬದುಕುವುದನ್ನು ಕಲಿತೆ. ಗೌರವಯುತ ಬದುಕು, ಸ್ವಾಭಿಮಾನ ಈ ಎರಡೂ ನನ್ನನ್ನು ರೂಪಿಸಿದವು. ಇದನ್ನು ನನಗೆ ಪರಿಚಯಿಸಿದ್ದು, ಇದೇ ನಿನ್ನ ಬದುಕಿನ ದಾರಿ ಎಂದು ಬೆರಳು ಮಾಡಿ ತೋರಿಸಿದ್ದು ಅದೇ ಅಂಬೇಡ್ಕರ್ ಅನ್ನೋ ಮಹಾಬೋಧಿ ವೃಕ್ಷ. ಹಾಗಾಗೇ ಅಂಬೇಡ್ಕರ್ ಯಾವತ್ತಿಗೂ ನನ್ನೊಳಗಿನ ಅರಿವು.

—ಮಂಜುಳಾ ಹುಲಿಕುಂಟೆ,
ಕವಯಿತ್ರಿ, ದೊಡ್ಡಬಳ್ಳಾಪುರ